ಸಾಕ್ಷಿ ಯನ್ನು ದಿಃ 22.12.2025 ರಂದು  ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ  ಆರೋಪಿ ಪರ ವಕೀಲರಿಂದ**

1. ನಮ್ಮ ಕುಟುಂಬದ ಜಮೀನಿನ ಸರ್ವೇ ನಂಬರ್ ಗಳು ನನಗೆ ನೆನಪಿಲ್ಲ. ಯಾವ ಸರ್ವೇ ನಂಬರ್ ನಲ್ಲಿ ಎಷ್ಟು ವಿಸ್ತೀರ್ಣ ಇದೆ ಎಂದು ಗೊತ್ತಿಲ್ಲ.
2. ನಮಗೆ ತಂಬಾಕು ಬ್ಯಾರನ್ ಮನೆ ಇರುವುದಿಲ್ಲ.
3. ಜಮೀನುಗಳಲ್ಲಿ ಜೋಳ ಬೆಳೆಯುತ್ತೇವೆ. 2021 ರಲ್ಲಿ ಎಷ್ಟು ಜೋಳ ಬೆಳೆದಿದ್ದೀರಿ ಎಂದರೆ, 600 ಚೀಲ ಬೆಳೆದಿದ್ದೆವು. 60 ಕೆ.ಜಿ ಚೀಲಗಳ ಮೂರು ಲೋಡ್ ಆಗಿತ್ತು.
4. ಜೋಳವನ್ನು 100 ಕೆ.ಜಿ ಬ್ಯಾಗ್ ಗಳಲ್ಲಿ ತುಂಬುತ್ತಾರೆ ಎಂದರೆ, 99 ಕೆ.ಜಿ ಚೀಲದಲ್ಲಿ ತುಂಬುತ್ತಾರೆ.
5. ಜೋಳವನ್ನು ಯಾರಿಗೆ ಮಾರಾಟ ಮಾಡಿದ್ದೀರಿ ಎಂದರೆ, ಸೂರ್ಯ ಅಗ್ರೋ ಸೆಂಟರ್ ರವರಿಗೆ ಮಾರಾಟ ಮಾಡಿದ್ದೆವು. ಒಂದು ಕ್ವಿಂಟಾಲ್ ಗೆ 1200 ರೂಪಾಯಿಗೆ ಮಾರಾಟ ಮಾಡಿದ್ದೆವು. ಒಟ್ಟು ಎಷ್ಟು ಹಣ ಆಗಿತ್ತು ಎಂದು ನೆನಪಿಲ್ಲ. ಆ ಬಗ್ಗೆ ರಶೀದಿ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ.
6. ನನ್ನ ಬಟ್ಟೆ ಅಂಗಡಿ ಹೆಸರು ಶ್ರೀ ವಿನಾಯಕ ಟೆಕ್ಸ್‌ಟೈಲ್. ಅದಕ್ಕೆ ಪರವಾನಿಗೆ ಪಡೆದಿಲ್ಲ. ಹಳೆ ಅಂಗಡಿ ಎಂದು ನುಡಿಯುತ್ತಾರೆ. ಅದು ಪಿರಿಯಾಪಟ್ಟಣದ ಬಿ.ಎಂ ರಸ್ತೆಯ ಸಂತೇಪೇಟೆಯಲ್ಲಿದೆ. ಅಂಗಡಿ ನುಂಜುಸ್ವಾಮಿರವರ ಬಾಡಿಗೆ ಕಟ್ಟಡದಲ್ಲಿ ಇದೆ. ತಿಂಗಳಿಗೆ 13500-00 ಬಡಿಗೆ ಇದೆ.
7. ಅಂಗಡಿಯಿಂದ ವರ್ಷಕ್ಕೆ ಸುಮಾರು 10-15 ಲಕ್ಷ ಆದಾಯ ಇದೆ. ನಾನು ಆದಾಯ ತೆರಿಗೆ ಪಾವತಿ ಮಾಡುತ್ತಿಲ್ಲ. ಮಾರಾಟ ತೆರಿಗೆ ಜಿ.ಎಸ್.ಟಿ ಕಟಾವು ಆಗುತ್ತದೆ, ನಾನು ಪ್ರತ್ಯೇಕವಾಗಿ ಕಟ್ಟುವುದಿಲ್ಲ.
8. ಬಟ್ಟೆ ಅಂಗಡಿಗೆ ಸಂಬಂಧಪಟ್ಟವರಿಂದ ಪರವಾನಿಗೆ ಪಡೆಯಬೇಕು ಎಂದರೆ, 30 ವರ್ಷದಿಂದ ಇರುವುದರಿಂದ ಪಡೆದಿಲ್ಲ. ಅದಕ್ಕೆ ಮಾರಾಟ ತೆರಿಗೆ ಸಹ ಕಟ್ಟಬೇಕು ಎಂದರೆ, ಜಿ.ಎಸ್.ಟಿ ಇರುವುದರಿಂದ 40 ಲಕ್ಷದವರೆಗೆ ಜಿ.ಎಸ್.ಟಿ ತೆರಿಗೆ ಇಲ್ಲ.
9. ಅಂಗಡಿಗೆ ಪರವಾನಿಗೆ ಪಡೆಯುವಂತೆ ನೊಟೀಸು ನೀಡಿದ್ದಾರೆ.
10. ನೀವು ಹೇಳುವಂತೆ ನಿಮಗೆ ಯಾವುದೇ ಬಟ್ಟೆ ಅಂಗಡಿ ಇಲ್ಲ ಹಾಗೂ ಆದಾಯ ಇಲ್ಲ ಎಂದರೆ ಸರಿಯಲ್ಲ.
11. ನಿಮಗೆ ಯಾವುದೇ ಜಮೀನು ಸಹ ಇಲ್ಲ, ನೀವು ಹೇಳುವಂತೆ ನೀವು ಯಾವುದೇ ಜೋಳ ಬೆಳೆಯುವುದಿಲ್ಲ ಎಂದರೆ ಸರಿಯಲ್ಲ.

12. ನಿಪಿ - 1ರ ಮೇಲೆ ಆರೋಪಿ ಯಾವ ಭಾಷೆಯಲ್ಲಿ ಸಹಿ ಮಾಡಿದ್ದಾರೆ ಎಂದು ನನಗೆ ನೆನಪಿಲ್ಲ. ಸಾಕ್ಷಿ ಮುಂದುವರಿದು ಇಂಗ್ಲೀಷ್ ನಲ್ಲಿ ಮಾಡಿದ್ದಾರೆ ಎಂದು ನುಡಿಯುತ್ತಾರೆ.
13. ಆರೋಪಿಗೆ ದಿಃ 15.04.2021 ರಲ್ಲಿ ಬೆಳಿಗ್ಗೆ ಸುಮಾರು 10-00 ಗಂಟೆಯಲ್ಲಿ ನಮ್ಮ ಮನೆಯಲ್ಲಿ ಹಣ ನೀಡಿದ್ದೆ. 500 ಮುಖಬೆಲೆಯ 4 ಕಟ್ಟುಗಳನ್ನು ನೀಡಿದ್ದೆ. ಆ ಬಗ್ಗೆ ಯಾವುದೇ ಬರವಣಿಗೆ ಮಾಡಿಲ್ಲ.
14. ಚೆಕ್ ಮೇಲೆ ಇರುವ ಬರವಣಿಗೆಯನ್ನು ಅವರೇ ಬರೆದುಕೊಂಡು ಬಂದು ನನಗೆ ಕೊಟ್ಟಿರುತ್ತಾರೆ. ನನ್ನ ಎದುರುಗಡೆ ಬರೆದಿಲ್ಲ. ಆ ಕಾರಣಕ್ಕೆ ನಿಮಗೆ ಅದನ್ನು ಯಾರು ಬರೆದರು ಎಂದು ನಿಮಗೆ ಗೊತ್ತಿಲ್ಲ ಎಂದರೆ, ಸಹಿ ಮಾತ್ರ ನನ್ನ ಮುಂದೆ ಮಾಡಿರುತ್ತಾರೆ, ಬಾಕಿ ಬರವಣಿಗೆ ನನಗೆ ಗೊತ್ತಿಲ್ಲ.
15. ಆರೋಪಿ ನಿಮಗೆ ಯಾವುದೇ ಸಾಲ ನೀಡಬೇಕಾಗಿಲ್ಲ ಹಾಗೂ ಆ ಕಾರಣಕ್ಕೆ ಅವರು ನಿಮಗೆ ಯಾವುದೇ ಚೆಕ್ ನೀಡಿಲ್ಲ ಎಂದರೆ ಸರಿಯಲ್ಲ.
16. ನೀವು ಯಾವುದೇ ವ್ಯವಸಾಯ ಹಾಗೂ ವ್ಯಾಪಾರ ಮಾಡುವುದಿಲ್ಲ, ಪ್ರತಿ ತಿಂಗಳು ಸೋಡಿ ಚೀಟಿ ವ್ಯವಹಾರ ಮಾಡುತ್ತೀರಾ ಎಂದರೆ ನಾನು ಯಾವುದೇ ಚೀಟಿ ವ್ಯವಹಾರ ಮಾಡುವುದಿಲ್ಲ.
17. ಆರೋಪಿ ಸೋಡಿ ಚೀಟಿ ವ್ಯವಹಾರಕ್ಕಾಗಿ ನೀಡಿದ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಸುಳ್ಳು ಪ್ರಕರಣ ಹಾಗೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ, ನಾನು ಯಾವುದೇ ಚೀಟಿ ವ್ಯವಹಾರ ಮಾಡುವುದಿಲ್ಲ.
18. ಆರೋಪಿಗೆ 2 ಲಕ್ಷ ಹಣ ನೀಡುವಷ್ಟು ನಿಮಗೆ ಆರ್ಥಿಕ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ.
19. ಆರೋಪಿಗೆ ಸಾಲ ನೀಡಿದ್ದಾಗಿ ಅವರಿಂದ ಅನ್ಯಥಾ ಫಾಯಿದೆ ಹೊಂದಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ